**ಎಸ್.ಸಿ. ನಂ. 10/2019**

**ದೋ.ಸಾ. : 69 ಪ್ರಾ.ಸಾ. : 61**

ಸಾಕ್ಷಿಯ ಹೆಸರು : ಶಿವಕುಮಾರ್ ಕೆ. ಆರ್

**ದಿನಾಂಕಃ 05-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

9. ಮರಣೋತ್ತರ ಪರೀಕ್ಷೆಯ ನಂತರ, ಶವವನ್ನು ಮೃತನ ಅಣ್ಣನಾದ ಚಾಸಾ-19 ರವರಿಗೆ ಬಿಟ್ಟುಕೊಟ್ಟಿರುತ್ತೇವೆ ಹಾಗೂ ಅದಕ್ಕೆ ಸಂಬಂಧಿಸಿದ ರಶೀದಿಯನ್ನು ಪಡೆದುಕೊಂಡಿರುತ್ತೇವೆ. ಸದರಿ ರಶೀದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-157 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-157(ಎ) ಎಂದು ಗುರುತಿಸಲಾಯಿತು. ಆನಂತರ, 2 ನೇ ಆರೋಪಿಯು ಪ್ರೇಮ್ ಕುಮಾರನ ಕೊಲೆ ಮಾಡುವ ಪೂರ್ವದಲ್ಲಿ ಆತನನ್ನು ಕರೆದುಕೊಂಡು ಬರಲು ಉಪಯೋಗಿಸಿದ ಜೆನ್ ಕಾರನ್ನು ಕಾರವಾರದಿಂದ ಚಲಾಯಿಸಿಕೊಂಡು ಬಂದು, ನಿಲ್ಲಿಸಿಟ್ಟ ಸ್ಥಳವನ್ನು ತೋರಿಸಿದ ಮೇರೆಗೆ ಸದರಿ ಸ್ಥಳವು, ಉಳವಿ-ಯಲ್ಲಾಪುರ ರಸ್ತೆಯ ದಕ್ಷಿಣ ಬದಿಯ ಕಚ್ಚಾ ರಸ್ತೆಯಾಗಿರುತ್ತದೆ. ನಂತರ ನಾನು ಸದರಿ ಸ್ಥಳವನ್ನು ಪರಿಶೀಲಿಸಿ, ಸಂಜೆ 4.30 ರಿಂದ 5.00 ರವರೆಗೆ ಪಂಚರ ಸಮಕ್ಷಮ ನಿಪಿ-24 ರಂತೆ ಪಂಚನಾಮೆ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಚಾಸಾ-46 ರವರು ಬರೆದಿರುತ್ತಾರೆ. ನಿಪಿ-24 ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-24(ಸಿ) ಎಂದು, ಚಾಸಾ-2 ರವರ ಸಹಿಯನ್ನು ನಿಪಿ-24(ಡಿ) ಎಂದು ಗುರುತಿಸಲಾಯಿತು. ಸದರಿ ಸ್ಥಳದ ಪಂಚನಾಮೆಗೆ ಸಂಬಂಧಿಸಿದಂತೆ ನಿಪಿ-25 ಮತ್ತು 26 ರಂತೆ ಫೋಟೊಗಳನ್ನು ತೆಗೆಸಿರುತ್ತೇನೆ.

10. ಪಂಚನಾಮೆಗಳನ್ನು ಮಾಡಿದ ಎಲ್ಲಾ ಸ್ಥಳಗಳಿಗೆ ಸಂಬಂಧಿಸಿದಂತೆ ನಿಪಿ-12 ನಕಾಶೆಯನ್ನು ತಯಾರಿಸಿರುತ್ತೇನೆ. ನಿಪಿ-12 ನಕಾಶೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-12(ಬಿ) ಎಂದು, ಚಾಸಾ-2 ರವರ ಸಹಿಯನ್ನು ನಿಪಿ-12(ಸಿ) ಎಂದು ಗುರುತಿಸಲಾಯಿತು. ಆನಂತರ ಆರೋಪಿಗಳನ್ನು ಕರೆದುಕೊಂಡು ಠಾಣೆಗೆ ಹಿಂದಿರುಗಿರುತ್ತೇನೆ. 2 ನೇ ಆರೋಪಿಯು ತನ್ನ ಸ್ವ-ಇಚ್ಛಾ ಹೇಳಿಕೆಯಲ್ಲಿ ತಾನು ಪ್ರೇಮ್ ಕುಮಾರನನ್ನು ಕೊಲೆ ಮಾಡುವ ಪೂರ್ವದಲ್ಲಿ, ಆತನನ್ನು ಕಾರವಾರದಿಂದ ಕಾರಿನಲ್ಲಿ ಕರೆದುಕೊಂಡು ಹೋದ ಸ್ಥಳವನ್ನು ತೋರಿಸುವುದಾಗಿ ಹೇಳಿದ್ದು, ಅದರಂತೆ 2 ನೇ ಆರೋಪಿಯನ್ನು ಮತ್ತು ಪಂಚರಾದ ಚಾಸಾ-4

ಮತ್ತು 5 ರವರನ್ನು ಕರೆದುಕೊಂಡು, 2 ನೇ ಆರೋಪಿಯು ತೋರಿಸಿದ ಕಾರವಾರದ ಜಿಲ್ಲಾಸ್ಪತ್ರೆಯ ಮುಂಭಾಗಕ್ಕೆ ಹೋಗಿದ್ದು, ಅಲ್ಲಿ 2 ನೇ ಆರೋಪಿಯು ಪ್ರೇಮ್ ಕುಮಾರನನ್ನು ಜೆನ್ ಕಾರಿನಲ್ಲಿ ಕರೆದುಕೊಂಡು ಹೋದ ಸ್ಥಳ ಎಂದು ತೋರಿಸಿದ ಮೇರೆಗೆ, ನಾನು ಸದರಿ ಸ್ಥಳವನ್ನು ಪರಿಶೀಲಿಸಿ, ಪಂಚರ ಸಮಕ್ಷಮ ಪಂಚನಾಮೆ ಮಾಡಿರುತ್ತೇನೆ. ಸದರಿ ಆವರಣದಲ್ಲಿ 2 ನೇ ಆರೋಪಿಯು ಪ್ರೇಮ್ ಕುಮಾರನು ತನ್ನ ದ್ವಿಚಕ್ರ ವಾಹನವನ್ನು ನಿಲ್ಲಿಸಿಟ್ಟ ಸ್ಥಳವನ್ನು ತೋರಿಸಿದ್ದು, ಸದರಿ ಸ್ಥಳವನ್ನೂ ಸಹ ಪರಿಶೀಲಿಸಿದ್ದು, ಅಲ್ಲಿ ಪ್ರೇಮ್ ಕುಮಾರನ ದ್ವಿಚಕ್ರ ವಾಹನ ನಂ. ಕೆ.ಎ–19/ಈ.ವಿ–8128 ವಾಹನವು ನಿಂತಿದ್ದು, ಸಂಜೆ 7.00 ರಿಂದ 8.00 ವರೆಗೆ ನಿಪಿ–1 ರಂತೆ ಪಂಚನಾಮೆಯನ್ನು ಮಾಡಿರುತ್ತೇನೆ ಹಾಗೂ ಸದರಿ ವಾಹವನ್ನು ಜಪ್ತುಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಚಾಸಾ–44 ರವರು ಗಣಕೀಕರಣ ಮಾಡಿರುತ್ತಾರೆ. ಸದರಿ ಸ್ಥಳದಲ್ಲಿ ನಿಪಿ–2 ಮತ್ತು 3 ರಂತೆ ಫೋಟೊ ತೆಗೆಸಿರುತ್ತೇನೆ. ನಿಪಿ–1 ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–1(ಡಿ) ಎಂದು ಗುರುತಿಸಲಾಯಿತು. ನಿಪಿ–3 ಫೋಟೊದಲ್ಲಿ ಕಾಣುತ್ತಿರುವ ದ್ವಿಚಕ್ರ ವಾಹನವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ದ್ವಿಚಕ್ರ ವಾಹನವನ್ನು ಅದರ ಮಾಲೀಕರು ಈಗಾಗಲೇ ನ್ಯಾಯಾಲಯದಿಂದ ಬಿಡಿಸಿಕೊಂಡು ಹೋಗಿದ್ದು, ಅದನ್ನು ನಿಪಿ–150 ರಿಂದ 153 ಫೋಟೋಗಳಲ್ಲಿ ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

11. ತನಿಖೆಯ ಸಮಯದಲ್ಲಿ 2 ನೇ ಆರೋಪಿಯು ತನ್ನ ಸ್ವ–ಇಚ್ಛಾ ಹೇಳಿಕೆಯಲ್ಲಿ 1 ನೇ ಆರೋಪಿ ಹಾಗೂ ಮೃತ ಪ್ರೇಮ್ ಕುಮಾರನ ನಡುವೆ ವ್ಯವಹಾರದ ಸಂಬಂಧ ವೈಷಮ್ಯವಿದ್ದು, ಆದಕಾರಣ 1 ನೇ ಆರೋಪಿಯು ಪ್ರೇಮ್ ಕುಮಾರನನ್ನು ಕೊಲೆ ಮಾಡಲು ಸೂಚಿಸಿ, ಅದಕ್ಕೆ ಅನುಕೂಲವಾಗುವಂತೆ ಜೆನ್ ಕಾರು ಮತ್ತು ಹಣವನ್ನೂ ಸಹ ನೀಡಿರುತ್ತಾನೆ ಹಾಗೂ ನಂತರ ನಾನು 3 ನೇ ಆರೋಪಿಯ ಸಹಾಯವನ್ನು ಪಡೆದುಕೊಂಡು, ಪ್ರೇಮ್ ಕುಮಾರನನ್ನು ಹತ್ಯೆ ಮಾಡಿರುತ್ತೇನೆ ಎಂದು ಹೇಳಿದ ಮೇರೆಗೆ ಹಾಗೂ ತನಿಖೆಯಲ್ಲಿ ಪ್ರೇಮ್ ಕುಮಾರನ ಕೊಲೆಯಾಗಿರುವುದು ಕಂಡುಬಂದ ಮೇರೆಗೆ, ಈ ಪ್ರಕರಣಕ್ಕೆ ಹೆಚ್ಚುವರಿಯಾಗಿ ಭಾರತೀಯ ದಂಡ ಸಂಹಿತೆ ಕಲಂ.109, 120(ಬಿ), 302, 201 ಸಹಿತ ಕಲಂ. 34 ನ್ನು ಅಳವಡಿಸಿಕೊಂಡು ಮುಂದಿನ ತನಿಖೆಯನ್ನು ಕೈಗೊಂಡ ಬಗ್ಗೆ ಮಾನ್ಯ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ಸದರಿ ವರದಿಯನ್ನು ನಿಪಿ–158 ಎಂದು, ಸಾಕ್ಷಿಯ ಸಹಿಯನ್ನು ನಿಪಿ–158(ಎ) ಎಂದು ಗುರುತಿಸಲಾಯಿತು.

12. ಆನಂತರ 2 ಮತ್ತು 3 ನೇ ಆರೋಪಿತರ ವೈದ್ಯಕೀಯ ಪರೀಕ್ಷೆ ಮಾಡಿಸಿ, ಅವರನ್ನು ಸೂಕ್ತ ಬೆಂಗಾವಲಿನೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಪಂಚನಾಮೆಯ ಸಮಯದಲ್ಲಿ ಜಪ್ತುಪಡಿಸಿಕೊಂಡಿರುವ ವಸ್ತುಗಳನ್ನು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಆನಂತರ 2 ಮತ್ತು 3 ನೇ ಆರೋಪಿತರು ತನಿಖೆಗೆ ಅವಶ್ಯವಿರುವುದು ಕಂಡುಬಂದ ಕಾರಣ, ಸದರಿ ಆರೋಪಿತರನ್ನು ತನಿಖೆಗಾಗಿ ಪೊಲೀಸ್ ಕಸ್ಟಡಿಗೆ ನೀಡುವಂತೆ ಮಾನ್ಯ ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡಿರುತ್ತೇನೆ. ಆನಂತರ ತನಿಖೆಯನ್ನು ಮುಂದುವರಿಸಿ, ದಿ.24-10-2018 ರಂದು ಪಿರ್ಯಾದಿಯನ್ನು ಠಾಣೆಗೆ ಕರೆಸಿ, ಅವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ-19, 20 ಮತ್ತು 21 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ, ಈ ಪ್ರಕರಣದ ಘಟನಾ ಸ್ಥಳಗಳ ನಕಾಶೆ ತಯಾರಿಸಿಕೊಡುವಂತೆ ಜೊಯ್ಡಾ ತಾಲೂಕಿನ ಲೋಕೋಪಯೋಗಿ ಇಲಾಖೆಗೆ ಕೋರಿಕೊಂಡಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-51 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-51(ಎ) ಎಂದು ಗುರುತಿಸಲಾಯಿತು.

13. ಅದೇ ದಿನ ಘಟನೆಗೆ ಸಂಬಂಧಿಸಿದಂತೆ, ಕೋರಿಕೆ ಪತ್ರಗಳಲ್ಲಿ ವಿವರಗಳನ್ನು ನಮೂದಿಸಿ, ದಾಖಲೆಗಳನ್ನು ಒದಗಿಸುವಂತೆ ವಲಯ ಅರಣ್ಯಾಧಿಕಾರಿಗಳು, ಅಣಸಿ ವನ್ಯಜೀವಿ ವಲಯ ರವರಿಗೆ ಕೋರಿಕೊಂಡಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-134 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-134(ಎ) ಎಂದು ಗುರುತಿಸಲಾಯಿತು. ಅದೇ ದಿನ 2 ನೇ ಆರೋಪಿಯ ಬ್ಯಾಂಕ್ ಖಾತೆಯ ದಾಖಲಾತಿಗಳನ್ನು ಪೂರೈಸುವಂತೆ ಕಾರವಾರದ ಐ.ಡಿ.ಬಿ.ಐ. ಬ್ಯಾಂಕ್ ಮತ್ತು ಅಲಿಗದ್ದಾದ ಎಸ್.ಬಿ.ಐ. ಬ್ಯಾಂಕ್ ಗಳಿಗೆ ಕೋರಿಕೊಂಡಿರುತ್ತೇನೆ. ಅದಾಗಲೇ ಚಾಸಾ-68 ರವರು ಮೃತನ ಹಾಗೂ 1 ರಿಂದ 3 ನೇ ಆರೋಪಿತರ ಸಿ.ಡಿ.ಆರ್. ಮಾಹಿತಿಯನ್ನು ಒದಗಿಸುವಂತೆ ಪೊಲೀಸ್ ಅಧೀಕ್ಷಕರು, ಕಾರವಾರ ರವರಿಗೆ ಕೋರಿಕೊಂಡಿದ್ದು, ಸದರಿ ಸಿ.ಡಿ.ಆರ್. ಮಾಹಿತಿಯನ್ನು ನಾನು ದಿ.24-10-2018 ರಂದು ಪಡೆದುಕೊಂಡು ಪರಿಶೀಲಿಸಿದಾಗ, 1 ಮತ್ತು 2 ನೇ ಆರೋಪಿತರು ನಿರಂತರವಾಗಿ ಸಂಪರ್ಕದಲ್ಲಿರುವುದು ಕಂಡುಬಂದಿರುತ್ತದೆ ಹಾಗೂ 1 ನೇ ಆರೋಪಿಯು ಖಾನಾಪುರ, ಬೆಳಗಾವಿ, ಹುಬ್ಬಳ್ಳಿ ಮತ್ತು ಯಲ್ಲಾಪುರ ಮಾರ್ಗವಾಗಿ ದಿ.17-10-2018 ರಂದು ಕಾರವಾರಕ್ಕೆ ಬಂದಿರುವುದು ಕಂಡುಬಂದಿರುತ್ತದೆ. ದಿ.18-10-2018

ರಂದು 1 ನೇ ಆರೋಪಿಯ ಅಂಕೋಲಾದ ಕಡೆಗೆ ಹೋಗಿ ಬಂದಿರುವುದು ಕಂಡುಬಂದಿರುತ್ತದೆ. ದಿ.19-10-2018 ರಂದು ಬೆಳಿಗ್ಗೆ 10.00 ಗಂಟೆಯ ನಂತರ ಆತನ ಮೊಬೈಲ್ ಬಂದ್ ಆಗಿರುವುದು ಕಂಡುಬಂದಿರುತ್ತದೆ.

14. ದಿ.25-10-2018 ರಂದು 2 ಮತ್ತು 3 ನೇ ಆರೋಪಿತರನ್ನು ಮಾನ್ಯ ನ್ಯಾಯಾಲಯದಿಂದ ಪೊಲೀಸ್ ಕಸ್ಟಡಿಗೆ ಪಡೆದುಕೊಂಡು, ವೈದ್ಯಕೀಯ ಪರೀಕ್ಷೆ ನಡೆಸಿ, ಠಾಣೆಯ ಭದ್ರಿಕೆಯಲ್ಲಿ ಇಟ್ಟಿರುತ್ತೇನೆ. ಅದೇ ದಿನ ಡಿ.ಎನ್.ಎ. ಪರೀಕ್ಷೆಗಾಗಿ ಮೃತನ ತಾಯಿಯಾದ ಸರೋಜಿನಿ ಗಂಗಾಧರ್ ನಾಯರ್ ರವರ ರಕ್ತದ ಮಾದರಿಯನ್ನು ಸಂಗ್ರಹಿಸಲು ದಿನಾಂಕವನ್ನು ನಿಗದಿಪಡಿಸುವಂತೆ ಮಾನ್ಯ ನ್ಯಾಯಾಲಯಕ್ಕೆ ಕೋರಿಕೊಂಡಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ನಿಪಿ-159 ಎಂದು, ಸಾಕ್ಷಿಯ ಸಹಿಯನ್ನು ನಿಪಿ-159(ಎ) ಎಂದು ಗುರುತಿಸಲಾಯಿತು. ಅದೇ ದಿನ ಸಾಕ್ಷಿದಾರರಾದ ಚಾಸಾ-24 ವಿನಯ್ ನಾಗೇಕರ್, ಚಾಸಾ-39 ಬಬನ್ ಕದಮ್, ಚಾಸಾ-40 ಮನೋಜ್ ಫೊಂಡೇಕರ್, ಚಾಸಾ-45 ಮುರಳೀಧರ್ ನಾಯ್ಕ, ಚಾಸಾ-46 ಮಹೇಶ್ ನಾಯ್ಕ ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ-24 ರವರು ನಿಪಿ-46 ರಂತೆ ಹೇಳಿಕೆ ನೀಡಿರುತ್ತಾರೆ. 2 ಮತ್ತು 3 ನೇ ಆರೋಪಿತರು ತಮ್ಮ ಸ್ವ-ಇಚ್ಛಾ ಹೇಳಿಕೆಯಲ್ಲಿ ಮೃತ ಪ್ರೇಮ್ ಕುಮಾರನ ಕೊಲೆ ಮಾಡಿದ ನಂತರ ಆತನ ಬಟ್ಟೆಗಳನ್ನು, ಶೂ, ಪರ್ಸ್ ಮತ್ತು ಹತ್ಯೆ ಮಾಡಲು ಬಳಸಿದ ಕತ್ತಿಗಳನ್ನು, ಕಣ್ಣಿಗೆ ಕಟ್ಟಿದ್ದ ಕಪ್ಪು ಬಣ್ಣದ ಬಟ್ಟೆಯ ತುಂಡು, ಕೃತ್ಯದ ಸಮಯದಲ್ಲಿ 2 ನೇ ಆರೋಪಿಯು ತಾನು ಧರಿಸಿದ ಬಟ್ಟೆಗಳನ್ನು ಬಿಸಾಕಿದ ಸ್ಥಳ ಮತ್ತು ಬಂಗಾರದ ಚೈನನ್ನು ಹಾಗೂ 3 ನೇ ಆರೋಪಿಯು ತಾನು ಕೃತ್ಯದ ಸಮಯದಲ್ಲಿ ಧರಿಸಿದ ಬಟ್ಟೆಗಳನ್ನು ಬಚ್ಚಿಟ್ಟ ಸ್ಥಳ ಹಾಗೂ ಕೃತ್ಯಕ್ಕೆ ಬಳಸಿದ ವಾಹನಗಳನ್ನು ಹಾಗೂ ಆರೋಪಿತರು ಕೃತ್ಯದ ಸಮಯದಲ್ಲಿ ಬಳಸುತ್ತಿದ್ದ ಮೊಬೈಲ್ ಫೋನುಗಳನ್ನು ತೋರಿಸಿ, ಹಾಜರುಪಡಿಸುವುದಾಗಿ ಹೇಳಿದ ಮೇರೆಗೆ ದಿ. 26-10-2018 ರಂದು ಪಂಚರಾದ ಚಾಸಾ-4 ಮತ್ತು 8 ರವರನ್ನು 2 ಮತ್ತು 3 ನೇ ಆರೋಪಿತರನ್ನು ಸಿಬ್ಬಂದಿಯೊಂದಿಗೆ ಬೆಳಿಗ್ಗೆ 5.30 ಗಂಟೆಗೆ ಠಾಣೆಯಿಂದ ಹೊರಟು, ಆರೋಪಿತರು ತೋರಿಸಿದಂತೆ ಬೆಳಿಗ್ಗೆ 8.15 ಗಂಟೆಗೆ ಗಣೇಶಗುಡಿಗೆ ತಲುಪಿರುತ್ತೇವೆ.

15. ಅಲ್ಲಿ 2 ನೇ ಆರೋಪಿಯು ವಾಹನವನ್ನು ನಿಲ್ಲಿಸುವಂತೆ ಹೇಳಿ ಕಾಳಿ ನದಿಯ ನೀರಿನಲ್ಲಿ ಮೃತನ ಬಟ್ಟೆಗಳನ್ನು, ಶೂ, ಪರ್ಸ್ ಮತ್ತು ಹತ್ಯೆ ಮಾಡಲು ಬಳಸಿದ ಕತ್ತಿಗಳನ್ನು, ಕಣ್ಣಿಗೆ ಕಟ್ಟಿದ್ದ

ಕಪ್ಪು ಬಣ್ಣದ ಬಟ್ಟೆಯ ತುಂಡು, ಕೃತ್ಯದ ಸಮಯದಲ್ಲಿ 2 ನೇ ಆರೋಪಿಯು ತಾನು ಧರಿಸಿದ ಬಟ್ಟೆಗಳನ್ನು ಬಿಸಾಕಿದ ಸ್ಥಳ ಎಂದು ತೋರಿಸಿದ್ದು, ಸದರಿ ಜಾಗದಲ್ಲಿ ನೀರಿನ ಹರಿವು ಇದ್ದುದರಿಂದ, ಸ್ಥಳದಲ್ಲಿ ಲಭ್ಯವಿದ್ದ ಫ್ಲೈ ಕ್ಯಾಚರ್ಸ್ ಅಡ್ವೆಂಚರ್ಸ್ ತಂಡದಲ್ಲಿದ್ದ ಮುಳುಗುತಜ್ಞರನ್ನು ಸಿಬ್ಬಂದಿಯವರ ಮೂಲಕ ಕರೆಸಿಕೊಂಡು, ಸದರಿಯವರ ಮೂಲಕ ಗಣೇಶಗುಡಿಯ ಸೇತುವೆಯ ಕೆಳಗೆ ನೀರಿನಲ್ಲಿ ಆರೋಪಿತರು ಎಸೆದಿದ್ದ ವಸ್ತುಗಳನ್ನು ಹುಡುಕುವಂತೆ ಸೂಚಿಸಿರುತ್ತೇನೆ. ಅದರಂತೆ ಮುಳುಗುತಜ್ಞರು ಕಾಳಿ ನದಿಯ ನೀರಿನಲ್ಲಿ ಸದರಿ ವಸ್ತುಗಳ ಹುಡುಕಾಟ ನಡೆಸಿದ್ದು, ಮಧ್ಯಾಹ್ನ ಸುಮಾರು 3.00 ಗಂಟೆಗೆ ಸೇತುವೆಯ 5 ನೇ ಪಿಲ್ಲರ್ ಬಳಿಯಲ್ಲಿ ಕಲ್ಲು ಬಂಡೆಗಳ ನಡುವೆ ಒಂದು ಕತ್ತಿ ಮಾತ್ರ ದೊರೆತಿರುತ್ತದೆ ಹಾಗೂ ಸದರಿ ಕತ್ತಿಯು ಮರದ ಹಿಡಿಕೆಯುಳ್ಳ ಕಬ್ಬಿಣದ ಕತ್ತಿಯಾಗಿರುತ್ತದೆ. ಸದರಿ ಕತ್ತಿಯನ್ನು ನೋಡಿ 2 ನೇ ಆರೋಪಿಯು ತಾನು ಇದೇ ಕತ್ತಿಯನ್ನು ಕೃತ್ಯಕ್ಕೆ ಬಳಸಿರುವುದಾಗಿ ಹೇಳಿದ್ದು, ಅದನ್ನು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡು, ಸೀಲು ಮಾಡಿ ಅದಕ್ಕೆ ಪಂಚರ ಸಹಿಯನ್ನು ಪಡೆದುಕೊಂಡಿರುತ್ತೇನೆ ಹಾಗೂ ಕತ್ತಿಯ ವಿವರವನ್ನು ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ. ಕತ್ತಿಯನ್ನು ಜಪ್ತುಪಡಿಸಿಕೊಳ್ಳುವ ಕಾಲಕ್ಕೆ ನಿಪಿ-4 ಮತ್ತು 5 ರಂತೆ ಫೋಟೊ ತೆಗೆಸಿರುತ್ತೇನೆ. ಈಗ ನ್ಯಾಯಾಲಯದ ಮುಂದಿರುವ ಎಂ.ಓ-1 ಕತ್ತಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಕತ್ತಿಗೆ ಅಂಟಿಸಿದ ಚೀಟಿಯಲ್ಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-1(ಸಿ) ಎಂದು ಗುರುತಿಸಲಾಯಿತು. ಆನಂತರ ಸ್ಥಳದಲ್ಲಿ ಮುಳುಗುತಜ್ಞರಾದ ಚಾಸಾ-38 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

16. ಈ ಪ್ರಕರಣದ 3 ನೇ ಆರೋಪಿಯು ತನ್ನ ಸ್ವ-ಇಚ್ಛಾ ಹೇಳಿಕೆಯಲ್ಲಿ ಮೃತನ ಮೈಮೇಲಿದ್ದ ಬಂಗಾರದ ಚೈನ್ ಹಾಗೂ ತಾನು ಕೃತ್ಯದ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಹಾಗೂ ಆ ಸಮಯದಲ್ಲಿ ತಾನು ಬಳಸಿದ್ದ ಮೊಬೈಲನ್ನು ತನ್ನ ಮನೆಯಲ್ಲಿಟ್ಟಿದ್ದು, ಅವುಗಳನ್ನು ತೋರಿಸಿ, ಹಾಜರುಪಡಿಸುವುದಾಗಿ ಹೇಳಿದ ಮೇರೆಗೆ ನಾನು ಆತನನ್ನು ಹಾಗೂ ಮೇಲೆ ಹೇಳಿದ ಪಂಚರನ್ನು ದಾಂಡೇಲಿಯಲ್ಲಿರುವ 3 ನೇ ಆರೋಪಿಯ ಮನೆಗೆ ಹೋಗಿದ್ದು, 3 ನೇ ಆರೋಪಿಯು ತನ್ನ ಮನೆಯ ಒಳಗೆ ಹೋಗಿ, ಒಂದು ಮೊಬೈಲ್ ಫೋನ್, ಒಂದು ಜೊತೆ ಬಟ್ಟೆ ಮತ್ತು ಒಂದು ಬಂಗಾರದ ನಮೂನೆಯ ಚೈನನ್ನು ತಂದು ಹಾಜರುಪಡಿಸಿದ್ದು, ಅವುಗಳನ್ನು ಪರಿಶೀಲಿಸಲಾಗಿ, ಸದರಿ ಮೊಬೈಲ್ ತಿಳಿ ಹಸಿರು ಬಣ್ಣದ ಸೋನಿ ಎಕ್ಸ್‌ಪೀರಿಯಾ ಕಂಪನಿಯದ್ದಾಗಿರುತ್ತದೆ. ಅದರಲ್ಲಿ ಒಂದು ಏರ್‌ಟೆಲ್ ಕಂಪನಿಯ ಮತ್ತು ಒಂದು

ಬಿ.ಎಸ್.ಎಸ್.ಎಲ್. ಕಂಪನಿಯ ಸಿಮ್ ಇರುತ್ತದೆ ಹಾಗೂ ಸದರಿ ಮೊಬೈಲ್ ಗೆ ಎರಡು ಐ.ಎಂ.ಈ.ಐ. ನಂಬರುಗಳು ಇರುತ್ತವೆ ಹಾಗೂ ಈ ಬಗ್ಗೆ ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ. ನಂತರ ಸದರಿ ಮೊಬೈಲನ್ನು ಜಪ್ತುಪಡಿಸಿಕೊಂಡು, ಅದಕ್ಕೆ ಪಂಚರ ಸಹಿ ಪಡೆದು, ಚೀಟಿಯನ್ನು ಅಂಟಿಸಿ, ಪ್ಲಾಸ್ಟಿಕ್ ಕವರಿನಲ್ಲಿ ಹಾಕಿ ಸೀಲು ಮಾಡಿರುತ್ತೇನೆ. ಸದರಿ ಮೊಬೈಲನ್ನು ಈಗಾಗಲೇ ಎಂ.ಓ–5 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ–5(ಬಿ) ಎಂದು ಗುರುತಿಸಲಾಯಿತು.

17. ನಂತರ 3 ನೇ ಆರೋಪಿಯು ಹಾಜರುಪಡಿಸಿದ ಬಟ್ಟೆಗಳನ್ನು ಪರಿಶೀಲಿಸಲಾಗಿ, ಸಿಮೆಂಟ್ ಬಣ್ಣದ ಒಂದು ಪ್ಯಾಂಟ್ ಇದ್ದು, ಅದರ ಸೊಂಟದ ಭಾಗದಲ್ಲಿ “Bandit” ಎಂಬ ಲೇಬಲ್ ಇರುತ್ತದೆ ಮತ್ತು ಬಟ್ಟೆಯ ಮೇಲೆ ಕಂದು ಬಣ್ಣ ಮಿಶ್ರಿತ ಕಲೆಗಳು ಕಂಡುಬಂದಿರುತ್ತದೆ. ನಂತರ ಶರ್ಟನ್ನು ಪರಿಶೀಲಿಸಲಾಗಿ, ಅದು ನೀಲಿ ಬಣ್ಣದ ಅರ್ಧ ಕೈ ತೋಳಿನ ರೌಂಡ್ ನೆಕ್ ಟೀ–ಶರ್ಟ್ ಆಗಿರುತ್ತದೆ ಹಾಗೂ ಅದರ ಎದೆಯ ಭಾಗದಲ್ಲಿ “Life is the sum of all your choices” ಎಂದು ಬರೆದಿರುತ್ತದೆ. ಸದರಿ ಶರ್ಟಿನ ಮೇಲೆಯೂ ಸಹ ಕಂದು ಬಣ್ಣ ಮಿಶ್ರಿತ ಕಲೆಗಳು ಕಂಡುಬಂದಿರುತ್ತದೆ. 3 ನೇ ಆರೋಪಿಯು ಹಾಜರುಪಡಿಸಿದ ಬಂಗಾರದ ನಮೂನೆಯ ಕತ್ತಿನ ಚೈನನ್ನು ಪರಿಶೀಲಿಸಲಾಗಿ, ಅದು ಕೊಂಡಿಯ ಬಳಿ ತುಂಡಾಗಿರುತ್ತದೆ ಹಾಗೂ ಅದರ ತೂಕ ಸುಮಾರು 12 ಗ್ರಾಂ. ಇರುತ್ತದೆ. ನಂತರ ಎರಡು ಬಟ್ಟೆಗಳನ್ನು ಹಾಗೂ ಚೈನನ್ನು ಪ್ರತ್ಯೇಕವಾಗಿ ಕವರಿನಲ್ಲಿ ಹಾಕಿ, ಸೀಲು ಮಾಡಿ ನಂತರ ಸಹಿ ಮಾಡಿದ ಚೀಟಿಯನ್ನು ಅಂಟಿಸಲಾಯಿತು. ಆ ಸಮಯದಲ್ಲಿ ನಿಪಿ–6 ರಂತೆ ಫೋಟೊ ತೆಗೆಸಿರುತ್ತೇನೆ. 3 ನೇ ಆರೋಪಿಯು ಹಾಜರುಪಡಿಸಿದ ಟೀ–ಶರ್ಟನ್ನು ಈಗಾಗಲೇ ಎಂ.ಓ–2 ಎಂದು, ಪ್ಯಾಂಟನ್ನು ಎಂ.ಓ–3 ಎಂದು ಗುರುತಿಸಲಾಗಿದ್ದು ಅವುಗಳ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ–2(ಬಿ) ಮತ್ತು ಎಂ.ಓ–3(ಬಿ) ಎಂದು ಗುರುತಿಸಲಾಯಿತು. ಬಂಗಾರದ ಚೈನನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ–4 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯು ಸಹಿಯನ್ನು ಎಂ.ಓ–4/1(ಸಿ) ಎಂದು ಗುರುತಿಸಲಾಯಿತು.

18. 2 ನೇ ಆರೋಪಿಯು ತನ್ನ ಸ್ವ–ಇಚ್ಛಾ ಹೇಳಿಕೆಯಲ್ಲಿ ತಾನು ಕೃತ್ಯದ ಸಮಯದಲ್ಲಿ ಬಳಸುತ್ತಿದ್ದ ಎರಡು ಮೊಬೈಲುಗಳನ್ನು ತನ್ನ ಮನೆಯಲ್ಲಿಟ್ಟಿರುವುದಾಗಿ ಹೇಳಿದ ಮೇರೆಗೆ, ನಾವು ಹಾಗೂ ಪಂಚರು 2 ನೇ ಆರೋಪಿಯ ಮನೆಗೆ ಆತನೊಂದಿಗೆ ಹೋಗಿದ್ದು, ಅಲ್ಲಿ 2 ನೇ

ಆರೋಪಿಯು ತನ್ನ ಮನೆಯಿಂದ ಎರಡು ಮೊಬೈಲುಗಳನ್ನು ತಂದು ಹಾಜರುಪಡಿಸಿದ್ದು, ಒಂದು ಎಂ.ಐ. ಕಂಪನಿಯ ಬೂದು ಬಣ್ಣದ ಫೋನು ಆಗಿರುತ್ತದೆ ಹಾಗೂ ಅದಕ್ಕೆ ಸಿಮ್ ಇರುವುದಿಲ್ಲ, ಮತ್ತೊಂದು ನೋಕಿಯಾ ಕಂಪನಿಯ ಕಪ್ಪು ಬಣ್ಣದ ಮೊಬೈಲ್ ಫೋನ್ ಇದ್ದು, ಅದಕ್ಕೂ ಸಹ ಸಿಮ್ ಇರುವುದಿಲ್ಲ. ಸದರಿ ಎರಡೂ ಮೊಬೈಲುಗಳ ಐ.ಎಂ.ಈ.ಐ. ನಂಬರುಗಳನ್ನು ಪರಿಶೀಲಿಸಿ, ಪಂಚನಾಮೆ ಜರುಗಿಸಿ ಐ.ಎಂ.ಈ.ಐ. ನಂಬರುಗಳನ್ನು ಪಂಚನಾಮೆಯಲ್ಲಿ ನಮೂದಿಸಿರುತ್ತೇನೆ ಹಾಗೂ ಮೊಬೈಲುಗಳನ್ನು ಜಪ್ತುಪಡಿಸಿಕೊಂಡು ಅವುಗಳಿಗೆ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತೇನೆ ನಂತರ ಅವುಗಳನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ, ಸೀಲು ಮಾಡಲಾಯಿತು. ಪಂಚನಾಮೆಯ ಕಾಲಕ್ಕೆ ನಿಪಿ-8 ರಂತೆ ಫೋಟೊ ತೆಗೆಸಿರುತ್ತೇನೆ. ಸದರಿ ಪಂಚನಾಮೆಯನ್ನು ಬೆಳಿಗ್ಗೆ 5.30 ರಿಂದ ಸಂಜೆ 6.45 ಗಂಟೆಯವರೆಗೆ ಮಾಡಿದ್ದು, ಅದನ್ನು ಚಾಸಾ-44 ರವರು ಗಣಕೀಕರಿಸಿರುತ್ತಾರೆ. ಸ್ಥಳದಲ್ಲಿದ್ದ ಸಾಕ್ಷಿದಾರರಾದ ಚಾಸಾ-27 ಮತ್ತು 28 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ-27 ರವರು ನಿಪಿ-31 ರಂತೆ, ಚಾಸಾ-28 ರವರು ನಿಪಿ-33 ರಂತೆ ಹೇಳಿಕೆಗಳನ್ನು ನೀಡಿರುತ್ತಾರೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಸಿ) ಎಂದು ಗುರುತಿಸಲಾಯಿತು. ಜಪ್ತುಪಡಿಸಿಕೊಂಡ ನೋಕಿಯಾ ಮೊಬೈಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ-6 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-6(ಬಿ) ಎಂದು ಗುರುತಿಸಲಾಯಿತು. ಅದೇ ರೀತಿ, ಎಂ.ಐ. ಕಂಪನಿಯ ಫೋನನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ-7 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-7(ಬಿ) ಎಂದು ಗುರುತಿಸಲಾಯಿತು.

19. ಸದರಿ ಪಂಚನಾಮೆಯ ನಂತರ 2 ಮತ್ತು 3 ನೇ ಆರೋಪಿತರನ್ನು ದಾಂಡೇಲಿಯ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೊಳಪಡಿಸಿ, ನಂತರ ಅವರನ್ನು ದಾಂಡೇಲಿಯ ಶಹರ ಪೊಲೀಸ್ ಠಾಣೆಯಲ್ಲಿ ಸೂಕ್ತ ಭದ್ರಿಕೆಯಲ್ಲಿ ಇಟ್ಟಿರುತ್ತೇವೆ. ಅದೇ ದಿನ, 3 ನೇ ಆರೋಪಿಯು ಕೃತ್ಯಕ್ಕೆ ಬಳಸಿದ ಮೋಟಾರು ಸೈಕಲಿನ ಮಾಲೀಕರಾದ ಚಾಸಾ-26 ರಮೇಶ ಲಮಾಣಿ ರವರಿಗೆ ದ್ವಿಚಕ್ರ ವಾಹನವನ್ನು ತಂದು ಹಾಜರಪಡಿಸುವಂತೆ ನೋಟಿಸ್ ನೀಡಿರುತ್ತೇನೆ. ಸದರಿ ನೋಟಿಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-160 ಎಂದು, ಸಾಕ್ಷಿಯ ಸಹಿಯನ್ನು ನಿಪಿ-160(ಎ) ಎಂದು ಗುರುತಿಸಲಾಯಿತು. ನಂತರ ತನಿಖೆಯನ್ನು

ಮುಂದುವರಿಸಿ, ದಿ.27-10-2018 ರಂದು 2 ಮತ್ತು 3 ನೇ ಆರೋಪಿಯರೊಂದಿಗೆ ಖಾನಾಪುರಕ್ಕೆ ಹೋಗಿರುತ್ತೇವೆ. ಅಲ್ಲಿಗೆ ಹೋದ ನಂತರ ಚಾಸಾ-9 ಮತ್ತು 10 ರವರಿಗೆ ಪಂಚರಾಗಿ ಬರುವಂತೆ ನೋಟಿಸ್ ನೀಡಿ, ಅವರನ್ನು ಪಂಚರನ್ನಾಗಿ ಬರಮಾಡಿಕೊಂಡಿದ್ದು, ಅಲ್ಲಿ 2 ನೇ ಆರೋಪಿಯು ತಾನು ಕೃತ್ಯದ ಸಮಯದಲ್ಲಿ ಬಳಸಿದ ಜೆನ್ ಕಾರನ್ನು ಚಾಸಾ-32 ರವರ ಗ್ಯಾರೇಜಿನಲ್ಲಿ ಇಟ್ಟಿರುವುದನ್ನು ತೋರಿಸಿದ್ದು, ಸದರಿ ಕಾರಿನ ಹಿಂದೆ ಮತ್ತು ಮುಂದೆ ನೊಂದಣಿ ಫಲಕವಿದ್ದು, ಅದರ ನಂ. ಎಂ.ಹೆಚ್-04/ಬಿ.ಕೆ-0726 ಆಗಿರುತ್ತದೆ. ಕಾರಿನ ಮುಂಬದಿಯ ಡ್ರಾವರಿನಲ್ಲಿ, ಸದರಿ ಕಾರಿನ ಆರ್.ಸಿ. ನೋಂದಣಿ ಪತ್ರದ ಲ್ಯಾಮಿನೇಷನ್ ಮಾಡಿದ ಕಾಗದ ಪತ್ರವಿರುತ್ತದೆ, ಜೊತೆಗೆ ಎರಡು ಲಕೋಟೆಗಳೂ ಸಹ ಇರುತ್ತವೆ. ಸದರಿ ಒಂದು ಲಕೋಟೆಯಲ್ಲಿ "pre owned car booking/ commitment cheque list" ಎಂದು ಬರೆದಿರುವ ಒಂದು ಕಾಗದ ಪತ್ರವಿದ್ದು, ಅದರಲ್ಲಿ ಕಸ್ಟಮರ್ ನ ಹೆಸರು ಮುಸ್ತಾಕ್ ಅಹಮದ್, ಮಾರುತಿ ನಗರ, ದಾಂಡೇಲಿ ಎಂದು ನಮೂದಾಗಿರುತ್ತದೆ ಹಾಗೂ ಅದರಲ್ಲಿ ಕಸ್ಟಮರ್ ಸಹಿ ಮತ್ತು ಶಾಂತೇಶ್ ಮೋಟಾರ್ಸ್ ನ ಸೇಲ್ಸ್ ಎಕ್ಸಿಕ್ಯೂಟಿವ್ ಮತ್ತು ಮ್ಯಾನೇಜರ್ ನ ಸಹಿ ಇರುತ್ತವೆ ಹಾಗೂ ಕಾರಿನ ಮಾಹಿತಿ ಇರುತ್ತದೆ. ಅದೇ ಲಕೋಟೆಯಲ್ಲಿ ಮತ್ತೊಂದು ಪತ್ರವಿದ್ದು, ವಾಹನದ ಕ್ಲೀಯರೆನ್ಸ್ ಸರ್ಟಿಫಿಕೇಟ್ ಕುರಿತು ಅರ್ಜಿ ಇರುತ್ತದೆ ಮತ್ತು ಕಾರನ್ನು ವರ್ಗಾವಣೆ ಮಾಡಲು ಸಹಿ ಮಾಡುವ ಫಾರ್ಮ್ ನಂ.29 ಮತ್ತು 30 ಇರುತ್ತವೆ. ಮತ್ತೊಂದು ಲಕೋಟೆಯ ಮೇಲೆ "ಮಾರುತಿ ಟ್ರೂ ವ್ಯಾಲ್ಯು ಶಾಂತೇಶ್ ಮೋಟಾರ್ಸ್, ಬೆಳಗಾವಿ" ಎಂದು ಬರೆದಿದ್ದು, ಅದರ ಒಳಗೆ ಜೆನ್ ಕಾರಿಗೆ ಸಂಬಂಧಿಸಿದ digit insurance ಪ್ರಮಾಣ ಪತ್ರ, ಹೊಗೆ ತಪಾಸಣೆ ಪತ್ರ ಇರುತ್ತವೆ. ಸದರಿ ಲಕೋಟೆಯಲ್ಲಿ ಎರಡು ರಶೀದಿಗಳು ಇದ್ದು, ಒಂದು ರಶೀದಿಯ ಸಂಖ್ಯೆ Axis Rcpt 14615, ದಿ.12-10-2018 ಎಂದು ಇದ್ದು, ಅದರಲ್ಲಿ ರೂ.40,000/-ಗಳು ನಮೂದಾಗಿರುತ್ತವೆ. ಮತ್ತೊಂದು ರಶೀದಿಯ ಸಂಖ್ಯೆ Axis Rcpt 14616, ದಿ.12-10-2018 ಎಂದು ಇದ್ದು, ಅದರಲ್ಲಿ ರೂ.5,090/-ಗಳು ಎಂದು ನಮೂದಾಗಿರುತ್ತದೆ. ಸದರಿ ದಾಖಲೆಗಳನ್ನು ಪಂಚರ ಸಮಕ್ಷಮ ಜಪ್ತುಪಡಿಸಿಕೊಂಡಿರುತ್ತೇನೆ. ಆರ್.ಸಿ. ಕಾರ್ಡನ್ನು ಈಗಾಗಲೇ ನಿಪಿ-37 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-37(ಬಿ) ಎಂದು ಗುರುತಿಸಲಾಯಿತು. ಉಳಿದ ಎಲ್ಲಾ ದಾಖಲೆಗಳನ್ನು ಒಟ್ಟಾರೆಯಾಗಿ ಈಗಾಗಲೇ ನಿಪಿ-38 ಎಂದು ಗುರುತಿಸಲಾಗಿರುತ್ತದೆ.

20. ಕಾರಿನ ಚಾಲಕನ ಪಕ್ಕದ ಸೀಟಿನ ಹಿಂದಿನ ಕಿಸೆಯಲ್ಲಿ ಪ್ಲಾಸ್ಟಿಕ್ ಬಾಟಲಿ ಇದ್ದು, ಅದನ್ನು ಪರಿಶೀಲಿಸಲಾಗಿ, ಅದರ ಮೇಲೆ "Goa special palm feni, coconut feni" ಎಂದು ಲೇಬಲ್ ಇರುವ ಸಾರಾಯಿ ಬಾಟಲಿ ಆಗಿರುತ್ತದೆ. ಸದರಿ ಲೇಬಲ್ ಮೇಲೆ ಒಣಗಿದ ರಕ್ತದ ಕಲೆ ಇರುತ್ತದೆ. ಸದರಿ ಸಾರಾಯಿ ಬಾಟಲಿಯನ್ನೂ ಹಾಗೂ ಕಾರನ್ನೂ ಸಹ ಪಂಚರ ಸಮಕ್ಷಮ ಬೆಳಿಗ್ಗೆ 11.30 ರಿಂದ 1.15 ಗಂಟೆಯವರೆಗೆ ಪಂಚನಾಮೆ ಜರುಗಿಸಿ, ಜಪ್ತುಪಡಿಸಿಕೊಂಡಿರುತ್ತೇನೆ. ಸದರಿ ಜಪ್ತು ಪಂಚನಾಮೆಯನ್ನು ಈಗಾಗಲೇ ನಿಪಿ-34 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-34(ಡಿ) ಎಂದು ಗುರುತಿಸಲಾಯಿತು. ಜಪ್ತುಪಡಿಸಿಕೊಂಡ ಸಾರಾಯಿ ಬಾಟಲಿಯನ್ನು ಈಗಾಗಲೇ ಎಂ.ಓ-13 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ-13(ಬಿ) ಎಂದು ಗುರುತಿಸಲಾಯಿತು. ಪಂಚರಿಗೆ ನೀಡಿದ ನೋಟಿಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-55 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-55(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಚಾಸಾ-44 ರವರು ಗಣಕೀಕರಿಸಿರುತ್ತಾರೆ. ಆ ಸಮಯದಲ್ಲಿ ತೆಗೆದ ಫೋಟೋಗಳನ್ನು ಈಗಾಗಲೇ ನಿಪಿ-35 ಮತ್ತು 36 ಎಂದು ಗುರುತಿಸಲಾಗಿರುತ್ತದೆ. ನ್ಯಾಯಾಲಯದ ಆವರಣದಲ್ಲಿರುವ ಜೆನ್ ಕಾರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ-11 ಎಂದು ಗುರುತಿಸಲಾಗಿರುತ್ತದೆ.

ನ್ಯಾಯಾಲಯದ ಅವಧಿ ಮುಗಿದಿದ್ದರಿಂದ, ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶವನ್ನು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ.